# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1505

2 ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)

3 ಉತ್ತರಿಸಬೇಕಾದ ದಿನಾಂಕ : 20.03.2025

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪಿ.ಎಸ್.ಐ-545 ಹುದ್ದೆಗಳ ನೇಮಕಾತಿಯ ಆಯ್ಕೆಪಟ್ಟಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ 40 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡದಿರಲು ಕಾರಣವೇನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 03 ಹೈಕಕೋ 2019 ದಿನಾಂಕ: 01.02.2023 ಅನ್ನು ಪ್ರಶ್ನಿಸಿ ಶ್ರೀ ಸಾಗರ್ ಬಾಬು ಸತ್ವಾರ್ ಎಂಬ ಆರ್.ಎಸ್.ಐ. (ಸಿಎಆರ್/ಡಿಎಆರ್) ಅಭ್ಯರ್ಥಿಯು ಮಾನ್ಯ ಕೆ.ಎಸ್.ಎ.ಟಿ.ಯಲ್ಲಿ ಅರ್ಜಿ ಸಲ್ಲಿಸಿದ್ದು, ಮಾನ್ಯ ನ್ಯಾಯ ಮಂಡಳಿಯು ಅರ್ಜಿದಾರರ ಪರವಾಗಿ ತೀರ್ಪು ನೀಡಿ, ದಿನಾಂಕ: 01.02.2023ರ ಸರ್ಕಾರದ ಸುತ್ತೋಲೆಯನ್ನು ರದ್ದುಪಡಿಸಿರುತ್ತದೆ. ಮಾನ್ಯ ಕೆ.ಎ.ಟಿಯ ದಿನಾಂಕ: 01.02.2024ರ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ: 16343/20ನ್ನು ಸಲ್ಲಿಸಲಾಗಿರುತ್ತದೆ. ಪೊಲೀಸ್ ಇಲಾಖೆಯಲ್ಲಿ ಕಳೆದ 04 ವರ್ಷಗಳಿಂದ ಪಿ.ಎಸ್.ಐ. ಹುದ್ದೆಗಳ ನೇಮಕಾತಿ ಮಾಡಲು ಸಾಧ್ಯವಾಗದೇ ಪಿ.ಎಸ್.ಐ ಹುದ್ದೆಗಳ ರಿಕ್ತ ಸ್ಥಾನಗಳು ಗಣನೀಯವಾಗಿ ಹೆಚ್ಚಾಗಿದ್ದರಿಂದ ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/76/ಪಿಇಎಂ/2024; ದಿನಾಂಕ: 18.10.2024 ರಲ್ಲಿ ಪಿಎಸ್ಐ(ಸಿವಿಲ್) 545 ಹುದ್ದೆಗಳ ನೇರ ನೇಮಕಾತಿ ಕುರಿತಂತೆ ಆಯ್ಕೆಪಟ್ಟಿಯನ್ನು ದಿನಾಂಕ 01.02.2023 ರ ಸುತ್ತೋಲೆಯನ್ವಯ ತಯಾರಿಸಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿರುತ್ತದೆ.<br><br>1. ದಿನಾಂಕ 06.06.2020ರ ಸುತ್ತೋಲೆಯನ್ವಯ ಆಯ್ಕೆ ಪಟ್ಟಿಯಿಂದ ಹೊರಗುಳಿಯುವ 40 ಕಲ್ಯಾಣ ಕರ್ನಾಟಕ ವೃಂದದ ಅಭ್ಯರ್ಥಿಗಳಿಗನುಗುಣವಾಗಿ 40 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ವೃಂದದಲ್ಲಿ ಕಾಯ್ದಿರಿಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.<br>2. ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಈ ಆಯ್ಕೆ ಪಟ್ಟಿಯು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂ. 16343/2024 ರಲ್ಲಿ ನೀಡುವ ಅಂತಿಮ ತೀರ್ಪಿಗೊಳಪಟ್ಟಿರುತ್ತದೆಂದು ಹಾಗೂ ಈ ಆಯ್ಕೆ ಪಟ್ಟಿಯಲ್ಲಿ ವೃಂದ ಬದಲಾವಣೆ, ಮೀಸಲಾತಿ ಪ್ರವರ್ಗ ಬದಲಾವಣೆ, ಅರ್ಹತಾ ಪಟ್ಟಿಯಲ್ಲಿನ ಸ್ಥಾನ ಮತ್ತು ಘಟಕಗಳ ಬದಲಾವಣೆ ಆಗುವ ಸಾಧ್ಯತೆಗೊಳಪಟ್ಟಿರುತ್ತದೆ ಎಂಬ ಷರತ್ತುಗಳನ್ನು ವಿಧಿಸುವುದು.<br><br>ಅದರಂತೆ ಪಿಎಸ್ಐ (ಸಿವಿಲ್) ಹುದ್ದೆಗಳಿಗೆ ಸಂಬಂಧಿಸಿದಂತೆ 505 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ 21.10.2024 ರಂದು ಪ್ರಕಟಿಸಲಾಗಿರುತ್ತದೆ. |

| | | |
|---|---|---|
| (ಆ) | WP-16343 ಈ ಪ್ರಕರಣವು RSI ಹುದ್ದೆಗಳಿಗೆ ಸಂಬಂಧಿಸಿದ್ದಾಗಿದ್ದು, ಇದೇ ಕಾರಣವನ್ನು PSI-545 ಹುದ್ದೆಗಳಲ್ಲಿನ ಕಲ್ಯಾಣ ಕರ್ನಾಟಕ ಭಾಗದ 40 ಅಭ್ಯರ್ಥಿಗಳಿಗೆ ಅನ್ವಯಿಸುತ್ತಿರಲು ಕಾರಣವೇನು: (ಮಾಹಿತಿ ನೀಡುವುದು) | WP-16343/2024 ಈ ಪ್ರಕರಣವು RSI ಹುದ್ದೆಗಳಿಗೆ ಸಂಬಂಧಿಸಿದ್ದಾಗಿದ್ದರೂ ಸಹ ಅದರ ಪರಿಣಾಮವು ಪಿ.ಎಸ್.ಐ. (ಸಿವಿಲ್) 545 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಮೇಲೂ ಬೀರುವುದರಿಂದ, ಸದರಿ ಪ್ರಕರಣವನ್ನು ಪಿ.ಎಸ್.ಐ. (ಸಿವಿಲ್) 545 ಹುದ್ದೆಗಳಿಗೂ ಅನ್ವಯಿಸಲಾಗಿದೆ. |
| (ಇ) | WP-16343ಗೆ ಸಂಬಂಧಿಸಿದಂತೆ ಈಗಾಗಲೇ RSI ಅಭ್ಯರ್ಥಿಗಳನ್ನು ತರಬೇತಿ ಮುಗಿಸಿ ಕೆಲಸಕ್ಕೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಹಾಗೂ PSI-545 ಹುದ್ದೆಗಳಲ್ಲಿ 505 ಅಭ್ಯರ್ಥಿಗಳು ಕೂಡ ಈಗಾಗಲೇ ತರಬೇತಿಗೆ ಹಾಜರಾಗಿದ್ದಾರೆ. ಆದರೆ ಇದರಿಂದಾಗಿ ಕಲ್ಯಾಣ ಕರ್ನಾಟಕ ಭಾಗದ 40 ಅಭ್ಯರ್ಥಿಗಳು ಅತಂತ್ರ ಪರಿಸ್ಥಿತಿಯಲ್ಲಿ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಇವರಿಗೆ ನೇಮಕಾತಿ ಆದೇಶ ನೀಡಲಾಗುವುದು (ವಿವರಣೆ ನೀಡುವುದು) | RSI ಅಧಿಕಾರಿಗಳ ತರಬೇತಿ ಮುಗಿಸಿ ಕೆಲಸಕ್ಕೆ ನಿಯುಕ್ತಿಗೊಂಡ ನಂತರ ಶ್ರೀ ಸಾಗರ್ ಬಾಬು ಸತ್ವರ್ ಇವರು ಮಾನ್ಯ ಕೆ.ಎ.ಟಿಯಲ್ಲಿ ಅರ್ಜಿ ಸಂಖ್ಯೆ: 1970/2023 ಅನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 01.01.2024ರಂದು ಅಂತಿಮ ತೀರ್ಪನ್ನು ಹೊರಡಿಸಿರುತ್ತದೆ. ಈ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಲಾಗಿದ್ದು,ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧವಾಗಿ ಕ್ರಮವಹಿಸಬೇಕಾಗುತ್ತದೆ. |

ಸಂಖ್ಯೆ: ಒಇ 65 ಪಿಇಐ 2025

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು